ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಬೇಕು. ನಿಮ್ಮ ಕವಿತೆಯನ್ನು, ನಿಯಮ ಪ್ರವಚನವನ್ನು ಕೇಳುವುದಕ್ಕೆ ನಾವು ಬಂದಿಲ್ಲ. ಇವತ್ತು ನೇರವಾಗಿ ಸದನದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು....

ಶ್ರೀ ರಾಮಚಂದ್ರೇಗೌಡ: ನೀವು ಪ್ರಶ್ನೆ ಮಾಡಿದ ಮೇಲೆ ಪ್ರವಚನವನ್ನು ಕೇಳಬೇಕು, ಎಲ್ಲಾ ಕೂಡ ಕೇಳಬೇಕು.

ಶ್ರೀ ಧರ್ಮಸಿಂಗ್: ಏಕೆ ಕೇಳಬೇಕು? ಜನರಿಗೆ ನೀರಿಲ್ಲ, ಜನರಿಗೆ ಕೆಲಸ ಇಲ್ಲ. ಜನರು ಸಾಯುತ್ತಿದ್ದಾರೆ. ಬಡತನ ರೇಖೆಗೆ ಒಳಗಾಗಿರತಕ್ಕಂಥ ಜನರ ಗತಿ ಏನು? ಅದು ಬೇಕಾಗಿದೆ. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಬಂದು ಸಮರ್ಪಕವಾದಂತಹ ಉತ್ತರವನ್ನು ಕೊಡಬೇಕಾಗಿತ್ತು, ಕೊಡಲಿಲ್ಲ. ಇವತ್ತು Planning Ministerಗೆ ಕೂಡ ಸಂಬಂಧಪಟ್ಟಂತಹ ವಿಚಾರ ಇದೆ. ನಾವೆಲ್ಲರೂ ಕೂಡ ಇದಕ್ಕೆ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಸರ್ಕಾರ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಉತ್ತರ ಕೊಡುತ್ತಿಲ್ಲ. ಆ ಭಾಗದ ಜನತೆಗೆ ಅನ್ಯಾಯವಾಗುತ್ತದೆ ಎಂದು ಪ್ರತಿಭಟಿಸಿ ನಾವು well ಗೆ ಬರುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ನಾಮಾಂಕಿತ ಸದಸ್ಯರಾದ ಶ್ರೀ ಐವಾನ್ ನಿಗ್ಲಿಯವರು ಧರಣಿ ಮಾಡಲು ಬಾವಿಗೆ ಬಂದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರೆ ಒಂದು ನಿಮಿಷ ಕೇಳಬೇಕು. ನಂಜುಂಡಪ್ಪ ವರದಿಯಲ್ಲಿ ಜೇವರ್ಗಿ, ಸೊರಬ, ಚಿಂಚೋಳಿ ಸೇರಿದೆ. ನಂಜುಂಡಪ್ಪ ವರದಿಯಲ್ಲಿ ಎಲ್ಲಾ ಮುಖ್ಯಮಂತ್ರಿಗಳಿಗೆ ಗೊತ್ತಿರುವಂತಹ ತಾಲ್ಲೂಕುಗಳು ಇವತ್ತು ಸೇರಿದೆ. ಜೇವರ್ಗಿ ಕೂಡ ಸೇರಿದೆ. ನೀವು ರಾಜ್ಯಕ್ಕೆ ಒಳ್ಳೆಯದು ಮಾಡಲಿಲ್ಲ.... ನಿಮ್ಮ ಕ್ಷೇತ್ರಕ್ಕೂ ಒಳ್ಳೆಯದು ಮಾಡಲಿಲ್ಲ. ಹಾಗಾದರೆ ಇವರು ಮಾಡಿದ್ದೇನು?

(ಗೊಂದಲ)

ಉಪಾಧ್ಯಕ್ಷರು: ಜ್ಞಾನೇಂದ್ರರವರೆ, ತಾವು ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ: ಈಗ ನಂಜುಂಡಪ್ಪ ವರದಿಯನ್ನು ಮುಂದಿಟ್ಟುಕೊಂಡು ಈ ಸರ್ಕಾರದಿಂದ ಹಣಬೇಕೆಂದು ಕೇಳುವುದಕ್ಕೆ ಹೊರಟಿದ್ದಾರೆ. ನಿಮಗೆ ನಾಚಿಕೆಯಾಗಬೇಕು.

ಉಪಾಧ್ಯಕ್ಷರು: ಡಾ: ಶರಣಪ್ರಕಾಶ್ ಪಾಟೀಲ್‌ರವರೆ, ಅವರು ಏನು ಉತ್ತರ ಕೊಡುತ್ತಾರೆಂದು ಪೂರ್ಣವಾಗಿ ಕೇಳಲೇ ಇಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಇವರ ಆಡಳಿತ ಇದ್ದಾಗ ಏನು ಮಾಡಿದ್ದಾರೆ? ಕರ್ನಾಟಕ ರಾಜ್ಯಕ್ಕೂ ಏನೂ ಮಾಡಲಿಲ್ಲ, ಇವರ ಕ್ಷೇತ್ರವಾದ ಜೇವರ್ಗಿಗೂ ಕೂಡ ಏನೂ ಮಾಡಲಿಲ್ಲ. ಇವರಿಗೆ ನಾಚಿಕೆಯಾಗಬೇಕು. ಇವರು ಈ ಸರ್ಕಾರದ ಹತ್ತಿರ ಡಾ: ನಂಜುಂಡಪ್ಪ ವರದಿಯನ್ನು ಹಿಡಿದುಕೊಂಡು ಬಂದಿದ್ದಾರೆ.

ಉಪಾಧ್ಯಕ್ಷರು: ಈಗ Finance Minister ಅನ್ನು ಕರೆಸುತ್ತೇವೆ. ಅವರು Council ನಲ್ಲಿ reply ಕೊಡುವುದಕ್ಕೆ ಹೋಗಿದ್ದಾರೆ. ಅವರು ಬರುತ್ತಾರೆ, ನೀವು ನಿಮ್ಮ seat ಗಳಿಗೆ ಹೋಗಿ ಕುಳಿತುಕೊಳ್ಳಿ. ಅವರು ಬರುತ್ತಾರೆ, ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

(ಈ ಹಂತದಲ್ಲಿ ಬಾವಿಯಲ್ಲಿ ನಿಂತುಕೊಂಡು ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು: ಹತ್ತು ನಿಮಿಷ ಅವರು ಬರುತ್ತಾರೆ. ದಯವಿಟ್ಟು ನಿಮ್ಮ seat ಗಳಿಗೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು: ತಾವು ತಮ್ಮ seat ಗಳಿಗೆ ಹೋದರೆ ಹತ್ತು ನಿಮಿಷದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಬರುತ್ತಾರೆ. ಈಗ ಅಲ್ಲಿ Calling Attention ಇದೆಯಂತೆ, ಅಲ್ಲಿ ಅವರು reply ಕೊಡುತ್ತಿದ್ದಾರೆ. ಅವರು ಹತ್ತು ಹದಿನೈದು ನಿಮಿಷದಲ್ಲಿ ಬರುತ್ತಾರೆ, ಅಲ್ಲಿಯವರೆಗೆ ಮಾನ್ಯ ರಾಮಚಂದ್ರೇಗೌಡರು ಉತ್ತರ ಕೊಡಲಿ. ತಾವು ದಯವಿಟ್ಟು ತಮ್ಮ seat ಗಳಿಗೆ ಹೋದರೆ ಒಳ್ಳೆಯದು.

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನದ ಕಲಾಪವು 6.00 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಹತ್ತು ನಿಮಿಷದ ನಂತರ ಸೇರಲು ನಿಶ್ಚಯಿಸಿತು)

(ಸದನದ ಕಲಾಪವು ಪುನಃ ರಾತ್ರಿ 8.10 ಗಂಟೆಗೆ ಪ್ರಾರಂಭವಾದಾಗ ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣ ಅಧಕ್ಷರ ಪೀಠದಲ್ಲಿ ಉಪಸ್ಥಿತರಾದರು)

(ಮಾನ್ಯ ವಿರೋಧ ಪಕ್ಷದ ನಾಯಕರು ಹಾಗು ಸದಸ್ಯರು ಧರಣಿಯಲ್ಲಿ ಭಾಗವಹಿಸಿದ್ದರು)

ಉಪಾಧ್ಯಕ್ಷರು:– ದಯಮಾಡಿ ತಾವೆಲ್ಲಾ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕಾಗಿ ವಿನಂತಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ನಾನು ನಂಜುಂಡಪ್ಪ ವರದಿಗೆ ಬೆಂಬಲವನ್ನು ಸೂಚಿಸಿ ಧರಣಿಯಲ್ಲಿ ಪಾಲ್ಗೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಧರಣಿಯಲ್ಲಿ ಪಾಲ್ಗೊಂಡಿದ್ದರು)

17. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

ವಿಷಯ: ಚಿಕ್ಕನಾಯಕನ ಹಳ್ಳಿಯಲ್ಲಿ ಶಾಲಾಕಟ್ಟಡ ಬಿದ್ದು ಮಕ್ಕಳು ಮೃತಪಟ್ಟಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸನ್ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು statement ಮಾಡಲಿಕ್ಕೆ ಅವಕಾಶ ಕೊಡಿ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡ ಕುಸಿದು ಬಿದ್ದಿರುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದರೆಂದು ಮಾನ್ಯ ಗೃಹ ಸಚಿವರಲ್ಲಿ ಕೇಳ ಬಯಸುತ್ತೇನೆ.

ಉಪಾಧ್ಯಕ್ಷರು:– ಮಾಧುಸ್ವಾಮಿಯವರೇ, ಮೊದಲು ಇವರ ಸಮಸ್ಯೆ ಬಗೆಹರಿಯಲಿ. ಆಮೇಲೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಉಪಾಧ್ಯಕ್ಷರೆ, ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡ ಬಿದ್ದು ಮಕ್ಕಳು ಮೃತಪಟ್ಟಿದ್ದಾರೆಂದು ದೂರವಾಣಿ ಕರೆ ಬಂದಿದೆ, ದಯಮಾಡಿ ಅವರಿಗೆ ಏನು ರಕ್ಷಣೆ ಕೊಟ್ಟಿದ್ದೀರಿ? ಅಲ್ಲಿ ತುಂಬಾ tension ಇದೆ, ಹಾಗಾಗಿ ಸನ್ಮಾನ್ಯ ಗೃಹ ಸಚಿವರು ಇದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿ ದ್ದಾರೆಂದು ಈಗಲೇ ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯಾಹ್ನ ಶಾಲಾ ಕಟ್ಟಡ ಕುಸಿದು ನಡೆದಿರುವ ದುರ್ಘಟನೆ ಬಗ್ಗೆ ಮಾನ್ಯ ಶಾಸಕರಾದ ಮಾಧುಸ್ವಾಮಿಯವರು ಪ್ರಸ್ತಾಪಿಸಿದ್ದಾರೆ.

ಉಪಾಧ್ಯಕ್ಷರು:– ಒಂದು ನಿಮಿಷ ಸಚಿವರು, ಈಗ House is not in order. I am requesting all the Members to go to their seats.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, House is in order ಇಂಥ ಪರಿಸ್ಥಿತಿಯಲ್ಲಿ ತಾವೇ ಅನೇಕ ಬಾರಿ ರೂಲಿಂಗ್ ಕೊಟ್ಟಿದ್ದೀರಿ. House is in order ಹಾಗಾಗಿ ಮಾನ್ಯ ಶಾಸಕರಾದ ಮಾಧುಸ್ವಾಮಿಯವರು ಕೇಳಿದಂತೆ ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯಾಹ್ನ ಶಾಲಾ ಕಟ್ಟಡ ಕುಸಿದು ಮಕ್ಕಳು ಮೃತಪಟ್ಟಿದ್ದಾರೆಂದು ಈಗ ಒಂದು ಗಂಟೆ ಹಿಂದೆ ನಮ್ಮ ಗಮನಕ್ಕೆ ತಂದರು. ನಾನು ಈಗಾಗಲೇ ನಮ್ಮ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆಯನ್ನು ನೀಡಿದ್ದೇನೆ, ಆ ದುರ್ಘಟನೆಯ ಬಗ್ಗೆ ಈ ಕೂಡಲೇ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು ನನಗೆ ತಕ್ಷಣವೇ ತಿಳಿಸಬೇಕೆಂದು ಹೇಳಿದ್ದೇನೆ. ಅಲ್ಲಿ ಏನಾದರೂ ಅವಘಡ ಗಳಾಗಿರುವ ಸಂದರ್ಭದಲ್ಲಿ ಅವರಿಗೆ ಏನು ಪರಿಹಾರ ಕೊಡಬೇಕೋ ಅದರ ಬಗ್ಗೆ ಮತ್ತು ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ವರದಿ ತರಿಸಿ ಮಾನ್ಯ ಶಾಸಕರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು: ಡಾ: ಅನ್ನದಾನಿಯವರು ಗಮನ ಸೆಳೆಯುವ ಸೂಚನೆ...

ಶ್ರೀ ಎಂ.ಪಿ.ಪ್ರಕಾಶ್: ಒಂದು ನಿಮಿಷ...

(ಗೊಂದಲ)

ಉಪಾಧ್ಯಕ್ಷರು:– ಆಯಿತು, ಒಂದು ನಿಮಿಷ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರೊಂದಿಗೆ ಮಾತನಾಡಿದ ಮೇಲೆ ಸೋಮವಾರದಂದು ಸನ್ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಉತ್ತರ ಕೊಡಿಸಿ ಎಂದು ಅವರು ಹೇಳಿದ್ದಾರೆ. ಆದುದರಿಂದ ದಿನಾಂಕ 6 ಮತ್ತು 7 ರಂದು ಅಂದರೆ ಸೋಮವಾರ, ಮಂಗಳವಾರ ಎರಡು ದಿವಸಗಳು ಅಧಿವೇಶನ ಸೇರುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಡುತ್ತಾರೆ. ಆದುದರಿಂದ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತು ಸಹಕರಿಸಬೇಕಾಗಿ ನಾನು ವಿನಂತಿಸುತ್ತೇನೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಧರಂಸಿಂಗ್, ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಶ್ರೀ ಎಂ.ಪಿ. ಪ್ರಕಾಶ್(ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಧನ್ಯವಾದಗಳು.

ಉಪಾಧ್ಯಕ್ಷರು:– ಅನ್ನದಾನಿಯವರೇ, ಗಮನ ಸೆಳೆಯುವ ಸೂಚನೆ.